## ಪದಬಂಧ



ಎಡದಿಂದ ಬಲಕ್ಕೆ

1. ಆರಿಸಿ ಬಂದವನ ಮುಖದ ತುಂಬ ಹಳದಿ ಬಣ್ಣ 4
3. ಏನೇನೋ ಆಡಲಿಕ್ಕೆ ಮಾಡಿದ್ದಲ್ಲ; ಇದು ಕುಸ್ತಿಯ ಕಣ 3
4. ಬಾರುಕೋಲು ಹಿಡಿದು ನೀಡಿದ ಎಚ್ಚರಿಕೆ 3
6. ಗತಿ ಇಲ್ಲದವರನ್ನು ಮೇಲೆತ್ತುವ ಹೊಣೆಗಾರಿಕೆ ಬಹಳ ದೊಡ್ಡದು 4
7. ಈಗೀಗ ವ್ಯಾಪಾರದವರ ನೆಲೆಯಾಗುತ್ತಿದೆ ಕೊನೆಗಾಣದ ಸಾಗರ 4
8. ಸಂಧಾನಕ್ಕೆಂದು ನಿಯೋಜಿತನಾಗಿರುವಾತ 'ಹಣದ ಗುಲಾಮ' 4
10. ಕಾಣೆಯಾದವರಿಗೆಲ್ಲ ನೆರವು ನೀಡಿದ ಆಪ್ತ ಸ್ನೇಹಿತ 4
12. ತೇರು ಮುರಿಯುವಂತಾದೊಡನೆ ಎಲ್ಲವೂ ಚೆಲ್ಲಾಪಿಲ್ಲಿ 4
14. ಭಾಗ್ಯವಂತನನ್ನು ಕುಗ್ಗಿಸಿದ್ದೂ ಆ ದೇವರೇ ಹೌದೇ? 4
16. ಊರಿನ ಗೌಡನೂ ನಡುಗುವಂತೆ ಮಾಡಿತು ಮಂಗ ಮುಂದಾಳು 3
17. ಏನನ್ನಾದರೂ ಮಾರಲು ಧರಿಸಿರಲೇಬೇಕು ಈ ಮುಂಡಾಸು 3
18. ರಾಜ ರಾಣಿಯರನ್ನು ಒಟ್ಟುಗೂಡಿಸಿ ಒಪ್ಪಿಸಿದ ಗೌರವದ ಕಾಣಿಕೆ 4

ಮೇಲಿನಿಂದ ಕೆಳಕ್ಕೆ

1. ಗುಡುಗು ಕೇಳಿಸಿದೊಡನೆ ಅಲ್ಲೇ ಅವಿಸಿಕೋ 3
2. ಕ್ರೂರ ಜನರ ಉಗುರು ಕೂಡ ಹೇಗಿದೆ ನೋಡಿ 3
3. ಆ ಊರಿನಿಂದಲೂ ಪ್ರವಾಹ ಪರಿಹಾರಕ್ಕೆ ಕೋರಿಕೆ ಬಂದಿದೆ 4
5. ರಾಜ್ಯವನ್ನಿಡೀ ಆವರಿಸಿತ್ತು ರೋಗದ ಜೊತೆಗಾರ 3
7. ಪೆಟ್ಟಿಗೆ ಮಾರುವ ಅಂಗಡಿಗೆ ಹೋಗಲು ಮೆಟ್ಟಿಲು ಮಾರ್ಗ 4
9. ಆರು ಜನರ ಸಾಹಸ ನೋಡಲು ನೆರೆದವರು ನೂರಾರು ಸಾವಿರ 4
11. ಕೊಳ್ಳೇಗಾಲದಲ್ಲಿ ಹಿಡಿದದ್ದು ಈ ಕಪ್ಪು ಸರ್ಪ 3
13. ಬೇರೆಲ್ಲೂ ಕಾಣ ಸಿಗುವುದಿಲ್ಲ ಇಂಥ ಚಾವಟಿ 4
14. ಬೇವಿನ ಮರಗಳ ನಡುವೆ ಒಂದು ಭಾರೀ ಮನೆ 3
15. ಈ ಸುಂದರ ತೋರಣವನ್ನು ನಿರ್ಮಿಸಿದ್ದು ಆ ಯುವತಿ 3

---

### 04–08–2022 ಉತ್ತರಗಳು

ಎಡದಿಂದ ಬಲಕ್ಕೆ

1. ಉದಾಸೀನ 3. ಆಗರ 4. ಗಗನ 6. ಗರಿಮುರಿ 7. ಅಂಗಾರಕ 9. ಅರವಿಂದ 11. ಕಡಿವಾಣ 13. ತರಗತಿ 15. ಅನಾಮಿಕ 17. ಗದರು 18. ರಂಜನೆ 19. ಹುಲ್ಲುಗಿಡ

ಮೇಲಿನಿಂದ ಕೆಳಕ್ಕೆ

1. ಉರಗ 2. ನಗರಿ 3. ಆದರ 5. ನಶ್ವರ 7. ಅಂತಕ 8. ಕರಣ 9. ಅನಂತ 10. ದಡೂತಿ 12. ವಾಲಗ 14. ರವಾನೆ 15. ಅರುಹು 16. ಕರಂಡ

ಪ್ರಶ್ನಾಂಕಣ

# ಗಾಡ್ವಿಟ್: ಏನು ವಿಸ್ಮಯ?

ಗಾಡ್ವಿಟ್. ಅದೊಂದು ಹಕ್ಕಿ. ಬಾರ್ ಟೇಲ್ಡ್ ಗಾಡ್ವಿಟ್ ಅದರ ಪೂರ್ಣ ಹೆಸರು. ಅದರದು ಸಾದಾ ಬಣ್ಣ, ಸಾಧಾರಣ ಗಾತ್ರ ಮತ್ತು ತುಂಬ ಸಾಮಾನ್ಯ ರೂಪ (ಚಿತ್ರ 1, 2 ನೋಡಿ). ಕಡಲ ತಡಿಯ ನೆಲೆಗಳಲ್ಲಿ ಅದರದು ವಾಸ. ಹಗಲಲ್ಲಿ ಕಡಲಂಚಿನ ನೆಲದಲ್ಲಿ, ಮರಳಲ್ಲಿ, ಕೆಸರಲ್ಲಿ ಅದರದು ಆಹಾರಾನ್ವೇಷಣೆ. ಏಡಿ, ನಳ್ಳಿ, ಮೃದ್ವಂಗಿ, ಪುಟ್ಟ ಮೀನುಗಳು ಇತ್ಯಾದಿ ಅದರ ಪ್ರಧಾನ ಆಹಾರ.

ಗಾಡ್ವಿಟ್ ಒಂದು ವಲಸೆಗಾರ ಹಕ್ಕಿ. ಪ್ರತಿ ವರ್ಷ ಬೇಸಿಗೆಯಲ್ಲಿ 'ಅಲಾಸ್ಕಾ'ದಲ್ಲಿ ಅದರ ಸಂತಾನವರ್ಧನಾ ಕಾರ್ಯಕ್ರಮ. ಅಲ್ಲಿ ಚಳಿಗಾಲ ಆರಂಭವಾದೊಡನೆ ದಕ್ಷಿಣದ 'ನ್ಯೂಜಿಲ್ಯಾಂಡ್'ಗೆ ಅದರ ಪಯಣ. ಇಲ್ಲಿ ಬೇಸಿಗೆ ಮುಗಿದೊಡನೆ ಮತ್ತೆ ಅಲಾಸ್ಕಾಗೇ ಮರು ಪಯಣ. ಗಾಡ್ವಿಟ್‌ನ ಈ ಪ್ರತಿವರ್ಷದ ವಲಸೆ ಪಯಣಗಳ ರೀತಿ ನೀತಿ ಒಂದೊಂದೂ ಅನನ್ಯ, ಅನೂಹ್ಯ, ಅದ್ವಿತೀಯ, ಅತ್ಯದ್ಭುತ. ಅದೇ ಗಾಡ್ವಿಟ್‌ನ ಪರಮ ವಿಸ್ಮಯ.

ಅಲಾಸ್ಕಾದಲ್ಲಿ (ಚಿತ್ರ 3 ಭೂಪಟದಲ್ಲಿ A) ಬೇಸಿಗೆ ಮುಗಿದೊಡನೆ ಗಾಡ್ವಿಟ್‌ಗಳು ಗುಂಪು ಗುಂಪಾಗಿ ದಕ್ಷಿಣದ ನ್ಯೂಜಿಲ್ಯಾಂಡ್‌ಗೆ (ಭೂಪಟದಲ್ಲಿ B) ಪಯಣ ಹೊರಡುತ್ತವೆ. 11,500 ಕಿ.ಮೀ ಉದ್ದದ ಈ ಇಡೀ ಪಯಣ ಪೆಸಿಫಿಕ್ ಮಹಾಸಾಗರದ ಮೇಲೇ ಸಾಗುತ್ತದೆ (A ಯಿಂದ B). ಹಾಗಾಗಿ ಎಲ್ಲೂ ಒಮ್ಮೆಯೂ ನಿಲ್ಲದೆ, ನೆಲಕ್ಕಿಳಿಯದೆ, ಹಗಲಿರುಳೆನ್ನದೆ, ಆಹಾರ ನೀರು ನಿದ್ರೆ ವಿಶ್ರಾಂತಿ ಇಲ್ಲದೆ (ಚಿತ್ರ 4) ಈ ಪಯಣವನ್ನು ಗಾಡ್ವಿಟ್‌ಗಳು ಎಂಟು ದಿನಗಳಲ್ಲಿ ಪೂರ್ಣಗೊಳಿಸುತ್ತವೆ! ಇಷ್ಟು ದೂರದ 'ತಡೆರಹಿತ' ವಲಸೆಯಾನವನ್ನು ಬೇರಾವ ಹಕ್ಕಿಯೂ ನಡೆಸುವುದಿಲ್ಲ. ಇದು ಗಾಡ್ವಿಟ್‌ನ ಪರಮ ವಿಸ್ಮಯದ ವಿಶ್ವ ದಾಖಲೆ.

ನ್ಯೂಜಿಲ್ಯಾಂಡ್‌ಗೆ ಬರುವ ವೇಳೆಗೆ ಸಂಪೂರ್ಣ ಸುಸ್ತಾಗಿ ಕೃಶವೂ ಆಗಿರುವ ಗಾಡ್ವಿಟ್ ಹಕ್ಕಿಗಳು ಅಲ್ಲಿನ ಕಡಲಂಚಿನಲ್ಲಿ ಚೆನ್ನಾಗಿ ಆಹಾರ ಸೇವಿಸಿ ವಿಶ್ರಮಿಸಿ ಮತ್ತೆ ಮೈದುಂಬಿಕೊಳ್ಳುತ್ತವೆ. ಆ ವೇಳೆಗೆ ಅಲ್ಲಿ ಬೆಚ್ಚಗಿನ ಋತುಮಾನ ಮುಗಿದು ಚಳಿಗಾಲ ಆರಂಭವಾಗುತ್ತದೆ. ಹಾಗಾದೊಡನೆ ಈ ಹಕ್ಕಿಗಳು ಮರುಪಯಣಕ್ಕೆ ಸಿದ್ಧವಾಗುತ್ತವೆ.




ಅಲಾಸ್ಕಾಗೆ ಹಿಂದಿರುಗುವಾಗ ಗಾಡ್ವಿಟ್‌ಗಳು ಅಲ್ಲಿಂದ ಬಂದ ದಾರಿಯನ್ನೇ ಹಿಡಿಯುವುದಿಲ್ಲ. ಬದಲಾಗಿ ಅನುಕೂಲಕರ ಮಾರುತಗಳ ಹಾದಿಯನ್ನೇ ಅನುಸರಿಸಿ, 9,500 ಕಿ.ಮೀ ದೂರ ಪಯಣಿಸಿ (B ಯಿಂದ C) ಅವು ಚೀನಾ ಸನಿಹದ (ಭೂಪಟದಲ್ಲಿ C) ಹಳದಿ ಸಮುದ್ರದ ತೀರಕ್ಕೆ ಬಂದಿಳಿಯುತ್ತವೆ. ಆ ವೇಳೆಗೆ ಅಲ್ಲಿ ಸಮೃದ್ಧವಾಗಿ ಸಿಗುವ ಲಾಳ ಏಡಿಗಳನ್ನು ತಿಂದು ಪೂರ್ಣ ಶಕ್ತಿ ಗಳಿಸಿ ನಂತರ ಅಲ್ಲಿಂದ 6,400 ಕಿ.ಮೀ ದೂರ ಹಾರಿ (C ಯಿಂದ A) ಅಲಾಸ್ಕಾವನ್ನು ತಲುಪುತ್ತವೆ. ತಮ್ಮ ಜೀವಿತಾವಧಿಯ 30 ವರ್ಷಗಳೂ ಪ್ರತಿವರ್ಷವೂ ಒಟ್ಟು 27,400 ಕಿ.ಮೀ ದೂರದ ಪರಮ ಸಾಹಸದ ಇಂಥ ಪಯಣ ನಡೆಸುವುದು ಈ ಹಕ್ಕಿಗಳ ಮಹದದ್ಭುತ.

■ ಎನ್ ವಾಸುದೇವ್